ಓ ಎಸ್ ನಂ.34/2023

ಪಿ.ಡಬ್ಲ್ಯೂ-1 ನಿಂಗಪ್ಪ ತಂದೆ ಅಂಬಾರಾಯ ಕೋಳಕೂರ

**(ಇಂದು ದಿನಾಂಕಃ 21-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

ಪಾಟೀ ಸವಾಲುಃ 5ನೇ ಪ್ರತಿವಾದಿ ಪರ ಶ್ರೀ ಡಬ್ಲ್ಯೂ. ಎ. ಜೆ. ವಕೀಲರಿಂದ.

1ನೇ ಪ್ರತಿವಾದಿ ಮಾರಾಟ ಮಾಡಿದ ಜಮೀನಿನ ಚೆಕ್ಕುಬಂದಿ ಗೊತ್ತು. ಪೂರ್ವಕ್ಕೆ ಗುತ್ತೇದಾರರವರ ಜಮೀನು ಪಶ್ಚಿಮಕ್ಕೆ ನಮ್ಮ ತಾಯಿ ಗಂಗಾಬಾಯಿರವರ ಜಮೀನು ಉತ್ತರಕ್ಕೆ ಶೇಗಜಿರವರ ಜಮೀನು ದಕ್ಷಿಣಕ್ಕೆ ಸಿದ್ದರಾಮರವರ ಜಮೀನು ಇರುತ್ತದೆ. ಸದರಿ ಅಕ್ಕ-ಪಕ್ಕದ ಜಮೀನಿನ ಮಾಲೀಕರ ಸರ್ವೆ ನಂಬರ ನನಗೆ ಹೇಳಲು ಗೊತ್ತಿಲ್ಲ. ಕೊಗನೂರ ಗ್ರಾಮದ ಉತ್ತರ ದಿಕ್ಕಿನಲ್ಲಿ ಸದರಿ ಜಮೀನು ಇರುತ್ತದೆ. ಸದರಿ ಜಮೀನು ಉತ್ತರಕ್ಕೆ ಬರುವುದಿಲ್ಲ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ 5ನೇ ಪ್ರತಿವಾದಿಗೆ ಮಾರಾಟ ಮಾಡಿದ ಜಮಿನಿನ ಸರ್ವೆ ನಂಬರ 31 ಇದ್ದು, ಅದು 5 ಎಕರೆ 38 ಗುಂಟೆ ಇರುತ್ತದೆ. ನಾನು ಹೇಳಿದ ವಿಸ್ತೀರ್ಣ ತಪ್ಪು ಇರುತ್ತದೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ರೂ.13,74,000/- ಗೆ 5ನೇ ಪ್ರತಿವಾದಿಗೆ ಜಮೀನು ಮಾರಾಟ ಮಾಡಿರುತ್ತಾರೆ. ನಾನು ನಿವೃತ್ತ ಬ್ಯಾಂಕ್ ಮ್ಯಾನೇಜರ ಇರುತ್ತೇನೆ ಎಂದರೆ ಸರಿ. ನನ್ನ ಹೆಂಡತಿ ಕೂಡಾ ಸರಕಾರಿ ನೌಕರಿಯಲ್ಲಿ ಇರುತ್ತಾರೆ ಎಂದರೆ ಸರಿ. ನನ್ನ 2 ಜನ ಮಕ್ಕಳು ಇಂಜೀನಿಯರ್ ಇರುತ್ತಾರೆ. ಸಾಕ್ಷಿ ಒಬ್ಬ ಮಗ ಅಮೇರಿಕಾದಲ್ಲಿ ಇರುತ್ತಾರೆ ಎನ್ನುತ್ತಾರೆ. ನನ್ನ ಮಕ್ಕಳು ನಮ್ಮ ಪಾಲು ನಮಗೆ ಸಿಕ್ಕಿರುತ್ತದೆ ಎಂದು ಮತ್ತು ಕೇಸನ್ನು ನಡೆಸಬೇಡಿ ಎಂದು ನನಗೆ ಹೇಳಿರುತ್ತಾರೆ ಎಂದರೆ ಸರಿಯಲ್ಲ. ಖರೀದಿ ಪತ್ರ ಸಾಕ್ಷಿದಾರರಾದ ರಾಜೇಂದ್ರ ಮತ್ತು ಸಂತೋಷ ನಮ್ಮ ಊರಿನವರು ಇರುತ್ತಾರೆ ಎಂದರೆ ಸರಿ.

2. 1ನೇ ಪ್ರತಿವಾದಿ ತಮ್ಮ ಪಾಲಿನ ಜಮೀನನ್ನು 5ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. 23 ವರ್ಷಗಳ ಹಿಂದೆ ನಾನು ನನ್ನ ಪಾಲಿನ ಜಮಿನನ್ನು ಮಾರಾಟ ಮಾಡಿರುತ್ತೆನೆ ಎಂದರೆ ಸರಿಯಲ್ಲ. ನಾನು ನನ್ನ ಪಾಲಿನ ಜಮೀನನ್ನು ಮಾರಾಟ ಮಾಡಿ ಕಲಬುರಗಿಯಲ್ಲಿ ಮನೆ ಕಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ತಾಯಿಗೆ ಆರೋಗ್ಯ ಸರಿಯಿಲ್ಲದ ಕಾರಣ ಅವರ ಆಸ್ಪತ್ರೆ ಖರ್ಚಿಗೆ ಹಣ ಬೇಕಾದಾಗ 1ನೇ ಪ್ರತಿವಾದಿ ನನ್ನನ್ನು ಕೂಡಾ ವಿಚಾರಿಸಿ, 5ನೇ ಪ್ರತಿವಾದಿಗೆ ಜಮೀನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. 5ನೇ ಪ್ರತಿವಾದಿ ಕೂಡಾ ಜಮೀನು ಖರೀದಿ ವಿಚಾರವನ್ನು ನನಗೆ ತಿಳಿಸಿದ್ದರು ಎಂದರೆ ಸರಿಯಲ್ಲ. ನನ್ನ ಪಾಲಿನ ಜಮೀನು ನನಗೆ ಈಗಾಗಲೇ ನೀಡಲಾಗಿದ್ದರೂ ಸಹ ನಾನು ಒಂದು ಸುಳ್ಳು ಕೇಸನ್ನು ಹಾಕಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.